ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 57 ]
Total No. of Questions : 57 ]

# C

**CCE PR**
**NSR & NSPR**

Question Paper Serial No. **100**

ಇಲ್ಲಿಂದ ಕತ್ತರಿಸಿ

**ಸಂಕೇತ ಸಂಖ್ಯೆ : 95-K**
**Code No. : 95-K**

# ವಿಷಯ : ಸಮಾಜಶಾಸ್ತ್ರ

# Subject : SOCIOLOGY

**(ಕನ್ನಡ ಮಾಧ್ಯಮ / Kannada Medium)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. & ಎನ್.ಎಸ್.ಪಿ.ಆರ್.)**

**(Private Repeater / NSR & NSPR)**

ದಿನಾಂಕ : 04. 07. 2022 ] [ Date : 04. 07. 2022
ಸಮಯ : ಬೆಳಗ್ಗೆ 10-30 ರಿಂದ ಮಧ್ಯಾಹ್ನ 1-45 ರವರೆಗೆ ] [ Time : 10-30 A.M. to 1-45 P.M.
ಗರಿಷ್ಠ ಅಂಕಗಳು : 100 ] [ Max. Marks : 100

**TEAR HERE TO OPEN THE QUESTION PAPER**
**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 57 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

Tear here

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ : **10 × 1 = 10**

1. ರಷ್ಯಾದ ಜನರು ಪ್ರಭಾವಿತರಾದದ್ದು ಇವರ ಸಿದ್ಧಾಂತದಿಂದ

(A) ಸ್ಟಾಲಿನ್

(B) ರೂಸ್ಸೋ

(C) ಕಾರ್ಲ್‌ಮಾರ್ಕ್ಸ್

(D) ಅಬ್ರಾಹಂ ಲಿಂಕನ್

2. ಸಾಮಾಜಿಕ ಬದಲಾವಣೆಯನ್ನು ತರುವ ಅತ್ಯಂತ ಪ್ರಭಾವಶಾಲಿ ಮಾಧ್ಯಮ

(A) ದೂರವಾಣಿ

(B) ದೂರದರ್ಶನ

(C) ಶಿಕ್ಷಣ

(D) ಸಮಾಜ

3. 'ಕ್ಯಾಸ್ಟ್ ಅಂಡ್ ರೇಸ್ ಇನ್ ಇಂಡಿಯಾ' ಎಂಬ ಪುಸ್ತಕವನ್ನು ಬರೆದವರು

(A) ಜಿ.ಎಸ್. ಗುರ್ರೆ

(B) ಗಾಂಧೀಜಿ

(C) ನೆಹರೂ

(D) ದಯಾನಂದ ಸರಸ್ವತಿ

4. ಜೈನ ಧರ್ಮದ ಸ್ಥಾಪಕ

(A) ಮಹಾವೀರ

(B) ಗೌತಮ ಬುದ್ಧ

(C) ಅಶೋಕ

(D) ಹರ್ಷವರ್ಧನ

5. ಹೋಂ ರೂಲ್ ಚಳವಳಿಯನ್ನು ಆರಂಭಿಸಿದವರು

(A) ಇಂದಿರಾ ಗಾಂಧಿ

(B) ಸರೋಜಿನಿ ನಾಯ್ಡು

(C) ಕಮಲ ನೆಹರೂ

(D) ಆ್ಯನಿಬೆಸೆಂಟ್

6. 1882 ರ ಹಂಟರ್ ಆಯೋಗ ಆದ್ಯತೆ ನೀಡಿದ್ದು

(A) ಉತ್ತಮ ಆಡಳಿತ ವ್ಯವಸ್ಥೆಗೆ

(B) ಭಾರತೀಯರಿಗೆ ರಾಜಕೀಯದಲ್ಲಿ ಮೀಸಲಾತಿಗೆ

(C) ಮಹಿಳಾ ಶಿಕ್ಷಣಕ್ಕೆ

(D) ಉದ್ಯೋಗದಲ್ಲಿ ಭಾರತೀಯರಿಗೆ ಮೀಸಲಾತಿಗೆ

7. ವೆರಿಯರ್ ಎಲ್ವಿನ್‌ರವರು ಬುಡಕಟ್ಟು ಅಧ್ಯಯನಗಳ ಬಗ್ಗೆ ಪ್ರಕಟಿಸಿರುವ ಪುಸ್ತಕ

(A) ದಿ ಬೆಂಗಾಲ್ ಗೆಜೆಟ್

(B) ಗುಲಾಮಗಿರಿ

(C) ಸತ್ಯಾರ್ಥ ಪ್ರಕಾಶ

(D) ದಿ ಬೈಗಾ

8. ಮೊಟ್ಟಮೊದಲ ಬುಡಕಟ್ಟು ಆಯೋಗದ ಅಧ್ಯಕ್ಷರು

(A) ಜಿ.ಎಸ್. ಗುರ್ರೆ

(B) ದಾಬರ್

(C) ತಕ್ಕರ ಬಾಪಾ

(D) ಜವಾಹರಲಾಲ್ ನೆಹರೂ

9. ಕೇಸರಿ ಪತ್ರಿಕೆಯನ್ನು ಪ್ರಕಟಿಸಿದವರು

(A) ಮಹಾತ್ಮ ಗಾಂಧಿ

(B) ಡಾ. ಬಿ.ಆರ್. ಅಂಬೇಡ್ಕರ್

(C) ಬಾಲಗಂಗಾಧರ್ ತಿಲಕ್

(D) ದಯಾನಂದ ಸರಸ್ವತಿ

10. ಸಿಲಿಕಾನ್ ಸಿಟಿ ಎಂದು ಪ್ರಸಿದ್ಧಿ ಪಡೆದಿರುವ ಕರ್ನಾಟಕದ ನಗರ

(A) ಮೈಸೂರು

(B) ಧಾರವಾಡ

(C) ದಾವಣಗೆರೆ

(D) ಬೆಂಗಳೂರು

**II. 11.** ***A*-ಪಟ್ಟಿಯನ್ನು *B*-ಪಟ್ಟಿಯೊಂದಿಗೆ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ :** **5 × 1 = 5**

| ***A*-ಪಟ್ಟಿ** | ***B*-ಪಟ್ಟಿ** |
|---|---|
| (A) ಸತ್ಯಶೋಧಕ ಸಮಾಜ | (i) ಸ್ವಾಮಿ ವಿವೇಕಾನಂದ |
| (B) ಬ್ರಹ್ಮ ಸಮಾಜ | (ii) ನಾರಾಯಣ ಗುರು |
| (C) ಆರ್ಯ ಸಮಾಜ | (iii) ಜ್ಯೋತಿರಾವ್ ಫುಲೆ |
| (D) ಶ್ರೀ ರಾಮಕೃಷ್ಣ ಮಿಷನ್ | (iv) ಆತ್ಮರಾಮ ಪಾಂಡುರಂಗ |
| (E) ಮಹಾಡ್ ಕೆರೆ ನೀರು ಮುಟ್ಟುವ ಚಳವಳಿ | (v) ರಾಜಾ ರಾಮ್‌ಮೋಹನ್ ರಾಯ್ |
| | (vi) ದಯಾನಂದ ಸರಸ್ವತಿ |
| | (vii) ಡಾ. ಬಿ.ಆರ್. ಅಂಬೇಡ್ಕರ್ |

**III. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **15 × 1 = 15**

12. ಸಾಮಾಜಿಕ ಬದಲಾವಣೆಯು ವಸ್ತುನಿಷ್ಠವಾಗಿದೆ. ಏಕೆ ?

13. ವಿಜ್ಞಾನ ಮತ್ತು ತಂತ್ರಜ್ಞಾನವು ಕೃಷಿ ವಿಧಾನಗಳನ್ನು ಹೇಗೆ ಸುಧಾರಿಸಿವೆ ?

14. ಕೈಗಾರಿಕೀಕರಣ ಎಂದರೇನು ?

15. ಪಕ್ಕಾ ಆಹಾರ ಎಂದರೇನು ?

16. ಮಹಿಳಾ ಶಿಕ್ಷಣಕ್ಕೆ ಮಹರ್ಷಿ ಕರ್ವೆಯವರ ಕೊಡುಗೆ ಏನು ?

17. ಭಾರತ ರಾಷ್ಟ್ರೀಯ ಸೈನ್ಯದ ಮಹಿಳಾ ಘಟಕದ ಮುಖ್ಯಸ್ಥರು ಯಾರಾಗಿದ್ದರು ?

18. ಎಸ್.ಎಫ್. ನಾಡಲ್‌ರವರ ಪ್ರಕಾರ ಬುಡಕಟ್ಟು ಎಂದರೇನು ?

19. ನಮ್ಮ ಸಂವಿಧಾನದ 335 ನೇ ವಿಧಿಯು ಬುಡಕಟ್ಟುಗಳಿಗೆ ಹೇಗೆ ಸಹಾಯ ಮಾಡಿದೆ ?

20. ಗಾಂಧೀಜಿಯವರು ಆದಿವಾಸಿಗಳನ್ನು ಏನೆಂದು ಕರೆದಿದ್ದಾರೆ ?

21. ಮೂಕನಾಯಕ ಪತ್ರಿಕೆಯನ್ನುಯಾರು ಆರಂಭಿಸಿದರು ?

22. ಸಮೂಹ ಮಾಧ್ಯಮಗಳ ಎರಡು ಪ್ರಕಾರಗಳು ಯಾವುವು ?

23. ಆರಂಭದಲ್ಲಿ ದೂರದರ್ಶನವನ್ನು ಸ್ಥಾಪಿಸಿದ್ದರ ಉದ್ದೇಶವೇನು ?

24. ಭಾರತದಲ್ಲಿ ರೇಡಿಯೋ ಕ್ಲಬ್‌ಗಳನ್ನು ಎಲ್ಲಿ ಸ್ಥಾಪಿಸಲಾಗಿತ್ತು ?

25. ಇಂಡೋ-ಚೀನಾ ಯುದ್ಧ ಯಾವಾಗ ನಡೆಯಿತು ?

26. ರೇಡಿಯೋಗೆ ತುಂಬಾ ಜನಪ್ರಿಯತೆ ತಂದು ಕೊಟ್ಟ ಕಾರ್ಯಕ್ರಮ ಯಾವುದು ?

**IV. ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : $24 \times 2 = 48$**

27. ಸಾಮಾಜಿಕ ಬದಲಾವಣೆಯ ಅನಿಶ್ಚಿತ. ಏಕೆ ?

28. ಸಾಮಾಜಿಕ ಬದಲಾವಣೆಯು ನಿಯೋಜಿತ ಮತ್ತು ಅನಿಯೋಜಿತ ಬದಲಾವಣೆಯಾಗಿದೆ. ಸಮರ್ಥಿಸಿ.

29. ಆಧುನೀಕರಣದಿಂದಾಗುವ ಪ್ರಯೋಜನಗಳೇನು ?

30. ಮೆಕ್ಕೈವರ್ ಮತ್ತು ಪೇಜ್‌ರವರ ಪ್ರಕಾರ ಜಾತಿ ಹೇಗೆ ಸ್ವರೂಪ ತಾಳಿದೆ ?

31. ಜಾತಿ ಪದ್ಧತಿಯಲ್ಲಿ ಬದಲಾವಣೆಗೆ ಕಾರಣವಾದ ಅಂಶಗಳ ಪಟ್ಟಿ ಮಾಡಿ.

32. ಬ್ರಿಟಿಷರ ಆಡಳಿತ ಅವಧಿಯಲ್ಲಿನ ಹಿಂದೂ ಪುನರ್ ವಿವಾಹ ಕಾಯ್ದೆಯ ಪ್ರಮುಖ ಅಂಶಗಳನ್ನು ತಿಳಿಸಿ.

33. ಮಹಿಳೆಯರ ಸ್ಥಾನಮಾನ ಉತ್ತಮಪಡಿಸಲು ಈಶ್ವರಚಂದ್ರ ವಿದ್ಯಾಸಾಗರರವರ ಕೊಡುಗೆಗಳೇನು ?

34. ವಿವಾಹಕ್ಕೆ ಸಂಬಂಧಪಟ್ಟ ಸ್ವಾತಂತ್ರ್ಯ ಪೂರ್ವದ ಕಾನೂನುಗಳನ್ನು ಹೆಸರಿಸಿ.

35. ನಮ್ಮ ಸಂವಿಧಾನದಲ್ಲಿ ಲಿಂಗತಾರತಮ್ಯ ತೊಡೆದು ಹಾಕಲು ಕೈಗೊಂಡಿರುವ ಕ್ರಮಗಳೇನು ?

36. ಬುಡಕಟ್ಟುಗಳ ಅಭಿವೃದ್ಧಿಗೆ ಭಾರತ ಸರ್ಕಾರ ರೂಪಿಸಿದ ನೀತಿಗಳಾವುವು ?

37. ನಮ್ಮ ಸಂವಿಧಾನದ 46 ನೇ ಅನುಚ್ಛೇದದ ಪ್ರಾಮುಖ್ಯತೆಯನ್ನು ವಿವರಿಸಿ.

38. 1996 ರ ಎರಡನೇ ಅನುಸೂಚಿತ ಪ್ರದೇಶ ಮತ್ತು ಬುಡಕಟ್ಟುಗಳ ಆಯೋಗದ ಸಲಹೆಗಳನ್ನು ತಿಳಿಸಿ.

39. ರೇಡಿಯೋವನ್ನು ಸಾಮಾನ್ಯ ಜನರು ಮೊದಮೊದಲು ಹೊಂದಲು ಸಾಧ್ಯವಾಗುತ್ತಿರಲಿಲ್ಲ. ಏಕೆ ?

40. ಚಲನ ಚಿತ್ರಗಳು ಸಾಮಾಜಿಕ ಮೌಲ್ಯಗಳನ್ನು ಹೇಗೆ ಪ್ರತಿಬಿಂಬಿಸುತ್ತವೆ ?

41. ಆಧುನಿಕ ಶಿಕ್ಷಣ ಒಂದು ಔದ್ಯೋಗಿಕ ಸಾಧನೆ. ಸಮರ್ಥಿಸಿ.

42. ಕೈಗಾರಿಕೀಕರಣದ ಪರಿಣಾಮಗಳೇನು ?

43. ಜಾತಿಯ ಗುಣಲಕ್ಷಣಗಳು ಯಾವುವು ?

44. ಸಾಮಾಜಿಕ ಬದಲಾವಣೆಗೆ ಜಾತಿ ಅಡ್ಡಿಯಾಗಿದೆ. ಹೇಗೆ ?

45. ಭಾರತೀಯ ಮಹಿಳಾ ಸ್ವಾತಂತ್ರ್ಯ ಹೋರಾಟಗಾರರನ್ನು ಹೆಸರಿಸಿ.

46. ಭಾರತದಲ್ಲಿನ ಮುಸ್ಲಿಂ ಆಳ್ವಿಕೆಯಲ್ಲಿ ಸ್ತ್ರೀಯರ ಸ್ಥಾನಮಾನ ಹೇಗಿತ್ತು ?

47. ಬುಡಕಟ್ಟು ಸಮುದಾಯಕ್ಕೆ ಇರುವ ಇತರೆ ಹೆಸರುಗಳು ಯಾವುವು ?

48. ಬುಡಕಟ್ಟು ಜನಾಂಗಗಳ ಅವನತಿಗೆ ಕಾರಣಗಳನ್ನು ತಿಳಿಸಿ.

49. ಆಧುನಿಕ ಜೀವನದಲ್ಲಿ ಗಣಕಯಂತ್ರದ ಉಪಯೋಗಗಳೇನು ?

50. ಮೊಬೈಲ್ ಫೋನ್‌ನಿಂದಾಗುವ ಉಪಯೋಗಗಳೇನು ?

**V. ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : 6 × 3 = 18**

51. ಶಿಕ್ಷಣವು ಸ್ತ್ರೀಯರ ಸ್ಥಾನಮಾನವನ್ನು ಸುಧಾರಿಸುತ್ತದೆ. ಹೇಗೆ ?

52. ಭಾರತದಲ್ಲಿ ಜಾತಿ ವ್ಯವಸ್ಥೆಯು ಯಾವ ಅಂಶಗಳ ಮೇಲೆ ಪ್ರಭಾವ ಬೀರುತ್ತದೆ ?

53. ಬ್ರಿಟಿಷರ ಕಾಲದಲ್ಲಿ ಮಹಿಳೆಯರ ಪ್ರಗತಿಗೆ ಶ್ರಮಿಸಿದ ಮಹಿಳಾ ಸಂಘಟನೆಗಳನ್ನು ಹೆಸರಿಸಿ.

54. ಬುಡಕಟ್ಟುಗಳ ಬದಲಾವಣೆಗೆ ಕಾರಣವಾಗುವ ಅಂಶಗಳನ್ನು ವಿವರಿಸಿ.

55. ಬುಡಕಟ್ಟುಗಳ ಅಧ್ಯಯನಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ವಿವರಿಸಿ.

56. ಸಮೂಹ ಮಾಧ್ಯಮಗಳಿಂದ ಭಾರತೀಯ ವಿವಾಹಗಳ ವ್ಯವಸ್ಥೆಯಲ್ಲಿ ಬದಲಾವಣೆ ಉಂಟಾಗಿದೆ. ವಿವರಿಸಿ.

**VI. ಈ ಪ್ರಶ್ನೆಗೆ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : 1 × 4 = 4**

57. ಸ್ತ್ರೀಯರ ಹಿತದೃಷ್ಟಿಯಿಂದ ಜಾರಿಗೊಳಿಸಲಾಗಿರುವ ಸಾಮಾಜಿಕ ಶಾಸನಗಳು ಯಾವುವು ?